# ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಉತ್ತಮ ಸಾಧನೆ

ಬನಹಟ್ಟಿ; ಪ್ರಸಕ್ತ ಸಾಲಿನ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, ರಬಕವಿ ಬನಹಟ್ಟಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಉತ್ತಮ ಫಲಿತಾಂಶ ಪಡೆದಿದೆ. ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿ ಶಿವಾನಂದ ಹೊಸೂರ ಶೇ. 91.53ಅಂಕ ಗಳಿಸಿ ಪ್ರಥಮ, ಸಿವಿಲ್ ವಿಭಾಗದ ನಾಗರಾಜ ಹಂಚಿನಾಳ ಶೇ. 91.23 ಅಂಕ ಗಳಿಸಿ ದ್ವಿತೀಯ ಹಾಗೂ ಇ ಮತ್ತು ಸಿ ವಿಭಾಗದ ಕವಿತಾ ಖಡಕಬಾಂವಿ ಶೇ. 91.06 ಅಂಕ ಗಳಿಸಿ ತೃತೀಯ ಸ್ಥಾನ ಪಡೆದಿದ್ದಾರೆ. ಇಂಜಿನಿಯರಿಂಗ್ ಗಣಿತಶಾಸ್ತ್ರದಲ್ಲಿ 5 ವಿದ್ಯಾರ್ಥಿಗಳು 100ಕ್ಕೆ ನೂರು ಅಂಕ ಪಡೆದುಕೊಂಡಿದ್ದಾರೆ. ಒಟ್ಟು 63 ಡಿಸ್ಟಿಂಗ್ಸನ್, 123 ಪ್ರಥಮ ದರ್ಜೆ ಸೇರಿದಂತೆ ಒಟ್ಟು 222 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು ಪ್ರಾಚಾರ್ಯ ಮಹಾದೇವ ಕತ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.